ಮತ್ತು ಆರು ಚುಕ್ಕಿಗಳ ಸೊಡರಿನ ರಂಗೋಲಿಗಳನ್ನು ಹೇಳಿಕೊಟ್ಟಳು.

ರಂಗೋಲಿಯಲ್ಲಿ ತುಂಬಾ ಕಷ್ಟದ ಕೆಲಸವೆಂದರೆ ನೇರವಾಗಿ ಗೆರೆ ಮೂಡುವಂತೆ ಚುಕ್ಕಿಗಳನ್ನು ಇಡುವುದು. ಮೊದಲ ನಾಲ್ಕೈದು ನಾಳುಗಳು ನಾನು ಚುಕ್ಕಿ ಇಡುವುದನ್ನು ನೋಡಿ ಅಮ್ಮ, 'ನೋಡು ನೋಡು, ನಿನ್ ಚುಕ್ಕಿ ಬೆಂಗ್ಳೂರಿಗೆ ಹೋಗಾಕತ್ತಾವ' ಎಂದು ನಗುತ್ತಿದ್ದಳು. ಅದೇನೋ ಏನೋ ನನ್ನ ಕೆಲಸ, ಕನಸು, ಬದುಕು ಎಂಬ ರಂಗೋಲಿಯ ಚುಕ್ಕಿಗಳು ಈಗ ಮೂಡುತ್ತಿರುವುದು ಬೆಂಗಳೂರಿನಲ್ಲಿಯೇ. ಅದನ್ನು ನೆನೆಸಿಕೊಂಡು ಈಗ, 'ಎಲ್ಲಾ ಅಮ್ಮ ಹೇಳಿದಂಗ ಆಗ್ತೈತೆ' ಎಂದು ನಗುತ್ತಿದ್ದೇನೆ.

ರಂಗೋಲಿ ಚಿತ್ರಗಳು ಆ ಹರೆಯದ ನನಗೆ ಅವು ತುಂಬಾ ಸುಳುವಾಗಿ ಕೈಗೆ ಹತ್ತಿದವು. ಎಷ್ಟೆಂದರೆ ಕಲಿತ ಎರಡು ಮೂರು ಏಡಿಗೇ ರಂಗೋಲಿಯನ್ನು ಬಿಟ್ಟು ಈಗ ಇಪ್ಪತ್ತು ಇಪ್ಪತ್ತೈದು ಏಡುಗಳಾಗಿದ್ದರೂ, ನಾನಿನ್ನೂ ಅವನ್ನು ಮರೆತಿಲ್ಲ, ಮರೆಯುವುದಿಲ್ಲ. ಮಲಗಿದವನನ್ನು ಯಾವುದೇ ಹೊತ್ತಿನಲ್ಲೂ ಎಬ್ಬಿಸಿ ಕೇಳಿದರೂ ಏಳು ಚುಕ್ಕಿದು, ಆರು ಚುಕ್ಕಿ ಆರು ಸಾಲಿನ ರಂಗೋಲಿಗಳನ್ನು ಎಲ್ಲೂ ಎಡವದೇ ಬಿಡಿಸಿ ತೋರಿಸುತ್ತೇನೆ.

ಒಂದೆರಡು ಸಲ ನನ್ನ ಗೆಳತಿಯರು ಕೆಲವರು ನಮ್ಮ ಮನೆಯ ಮುಂದೆ ಓಡಾಡುವ ಹೊತ್ತಿಗೆ ಸರಿಯಾಗಿ ನಾನು ರಂಗೋಲಿ ಬಿಡಿಸುತ್ತಿರುವುದ ಕಂಡು ನಿಂತು ನೋಡಿ, 'ಚೆನ್ನಾಗಿದೆ' ಎಂದು ಹೊಗಳಿದ್ದು, ಮರುನಾಳು ಕಲಿಮನೆಯಲ್ಲಿ ಉಳಿದವರೊಂದಿಗೆ ಹೇಳಿದ್ದು ಕೇಳಿ ಹೆಮ್ಮೆಯಾಗಿತ್ತು. ಓಣಿಯ ಕೆಲಸ ಹೆಂಗಸರೂ, ನಾನು ರಂಗೋಲಿ ಬಿಡಿಸುವುದ ಕಂಡು ಅಮ್ಮನಲ್ಲಿ ನನ್ನನ್ನು ಹೊಗಳಿ, ತಮ್ಮ ಗಂಡು ಮಕ್ಕಳ ಬಗ್ಗೆ, 'ನಮ್ ಮನಿಯವು ಒಂದು ಸಣ್ಣ ನೀರಿನ್ ಲೋಟ ಎತ್ತಿಡಂಗಿಲ್ಲ' ಎಂದು ಬೇಸರ ಹೇಳಿಕೊಳ್ಳುತ್ತಿದ್ದರು. ಗೊತ್ತಿರುವ ಎರಡು ರಂಗೋಲಿಗಳನ್ನು ಅಂಗಳದಲ್ಲಿ ಬಿಡಿಸಲು ನನಗೆ ಸಿಕ್ಕೇ ಸಿಗುತ್ತಿದ್ದುದು ಎಲ್ಲಾ ತಿಂಗಳಲ್ಲಿ ಎರಡೇ ನಾಳುಗಳು ಮಾತ್ರ, ಅದೂ ಅಮ್ಮ ತನಗೆ ಮೈಕೈ ನೋವು ಅಂತ ಅಂದಾಗ. ಒಂದರ ಹಿಂದಿನ ಒಂದರ ಆ ಎರಡು ನಾಳುಗಳು, ನಾನು ನನಗೆ ಈಗಲೂ ನೆನಪಿರುವ ಅವೇ ಸೊಡರುಗಳ ರಂಗೋಲಿ ಹಾಕುತ್ತಿದ್ದುದು. ಕಲಿಮನೆ, ಟ್ಯೂಶನ್ನು ರಜೆಗಳಿದ್ದಾಗ ನಾನೇ ಕೇಳಿ ರಂಗೋಲಿ ಹಾಕುತ್ತಿದ್ದೆ ಎನ್ನುವುದು ನನ್ನ ಮಸುಕಾದ ನೆನಪು, ಸುಳ್ಳೋ ದಿಟವೋ ಅಮ್ಮನನ್ನು ಕೇಳಿ ತಿಳಿದುಕೊಳ್ಳಬೇಕು.

4

ಹೊಸ ಏಡು, ಸಂಕ್ರಾಂತಿ, ಯುಗಾದಿ, ದಸರಾ ಮತ್ತು ದೀಪಾವಳಿ ಬಂದರೆ ನನಗೆ ಹಿಂದಿನ ನಾಳು ಅಂಗಡಿಗೆ ಹೋಗುವಾಗ ನನಗೆ ಹೆದರಿಕೆಯಾಗುತ್ತಿತ್ತು. ಅದೇಕೆಂದರೆ ಅಮ್ಮ ನನ್ನನ್ನು ದೂರದ ಅಂಗಡಿಗೆ ರಂಗೋಲಿ ಪುಡಿಯನ್ನು ತರಲು ಕಳಿಸಿರುತ್ತಿದ್ದಳು. ಮನೆಯ ಹತ್ತಿರ ಏಳೆಂಟು ರೂಪಾಯಿಗೊಂದು ಸೇರು ರಂಗೋಲಿ ಪುಡಿ ಸಿಗುವುದನ್ನು ತಪ್ಪಿಸಿಕೊಂಡ ಅಮ್ಮನಿಂದಾಗಿ, ಹತ್ತು ರೂಪಾಯಿ ಕೊಡಲೇ ಬೇಕಾದ ಪ್ಯಾಕೆಟ್ಟಿನ ರಂಗೋಲಿಯನ್ನು ಅವಳಿಗಾಗಿ ತರುವುದು ನನಗೆ ತುಂಬಾ ತೊಡಕಿನ ಕೆಲಸವಾಗಿತ್ತು. ಏಳನೆಯ ತರಗತಿ ಬಂದಿದ್ದರೂ ಇನ್ನೂ ಸೈಕಲ್ಲು ಕಾಣದ ಬದುಕು ನಂದಾಗಿತ್ತು. ಎಲ್ಲಾ ಓಡಾಟಗಳಿಗೂ ಕಾಲುಗಳು ನೆಲ ಮುಟ್ಟಲೇಬೇಕಿತ್ತು. ಅಂಗಡಿಯವನು ಯಡವಟ್ಟು ರಂಗೋಲಿ ಕೊಟ್ಟನೋ, ಸರಿಯಾದ್ದು ಸಿಗೋವರೆಗೂ ನಾನು ಅಲೆಯುತ್ತಲೇ ಇರಬೇಕು. ಒಂದೇ ಬ್ರ್ಯಾಂಡಿನದ್ದು ಇದ್ದರೆ ನಾನು ಬದುಕಿಕೊಂಡೆ, ಮನೆಗೆ ಬಂದು ಇರೋದೇ ಇದು ಅಂದರೆ ನಡೆಯುತ್ತಿತ್ತು. ಆದರೆ ಎರಡು ಮೂರು ಇದ್ದರೆ, ಇದ್ದು ನಾನು ಸುಳ್ಳು ಹೇಳಿದ್ದರೆ, ಮೂರ್ನಾಲ್ಕು ತಿಂಗಳಿಗೊಮ್ಮೆ ಕಾರ ಕುಟ್ಟಿಸಿಕೊಂಡು ಬರಲು ಹೋದಾಗ, ದಾರಿಯಲ್ಲಿ ಸಿಗುತ್ತಿದ್ದ ರಂಗೋಲಿ ಅಂಗಡಿಯ ಅಕ್ಕನಿಂದ, ಅಮ್ಮನಿಗೆ ನನ್ನ ಮೈಗಳ್ಳತನದ ಮಸಲತ್ತಿನ ಸುದ್ದಿ ಗೊತ್ತಾಗಿ, ಕಾದು ಒದೆ ಕೊಡುತ್ತಿದ್ದಳು. ಹಾಗಾಗಿ ರಂಗೋಲಿಯ ಸುದ್ದಿಯಲ್ಲಿ ಮಾತ್ರ ನಾನು ಎಂದಿಗೂ ಸುಳ್ಳು ಹೇಳುತ್ತಿರಲಿಲ್ಲವೆಂದು ಎದೆ ತಟ್ಟಿಕೊಂಡು ಈಗಲೂ ಹೇಳಬಲ್ಲೆ. (ಮನೆಗೆ ಬೇಕಿರುವ ಕಾರದ ಪುಡಿಗಾಗಿ ಒಣ ಮೆಣಸಿನಕಾಯಿಗಳನ್ನು ಕುಟ್ಟಿಸುವ ಕೆಲಸವನ್ನು ಮಾತ್ರ ಅಮ್ಮ ಇಲ್ಲಿಯವರೆಗೆ ನನಗೆ ಒಮ್ಮೆಯೂ ಕೊಟ್ಟಿಲ್ಲ. ಯಾಕೆ ಎಂದು ಈಗ ಕೇಳಿದರೂ, 'ನೀನು ಸರೀಗೆ ಕುಟ್ಟಿಸ್ಗೆಂಡು ಬರಲ್ಲ' ಎನ್ನುತ್ತಾಳೆ. ನೋಡಿ, ನನ್ನ ಮೇಲೆ ನಮ್ಮಮ್ಮನಿಗೆ ಅಷ್ಟೊಂದು ಗಟ್ಟಿ ನಂಬಿಕೆ!)

ನನಗೂ ಸರಿ ಇರದ ರಂಗೋಲಿ ಪುಡಿಯನ್ನು ತಂದುಕೊಟ್ಟು ಹಬ್ಬದ ನಾಳು, ಮನೆಯ ಅಂಗಳವನ್ನು ಬೇರೆ ಎಲ್ಲರ ಅಂಗಳಗಳಿಗಿಂತ ಮಬ್ಬಾಗಿ ಕಾಣಿಸುವಂತೆ ಮಾಡುವುದು ಇಷ್ಟವಿರಲಿಲ್ಲ. ರಂಗೋಲಿಗೆ ಕಲೆಸುವ ಬಣ್ಣ ಒಳ್ಳೆಯದಾಗಿರುವುದು ಎಷ್ಟು ಅರಿದೋ (ಮುಖ್ಯ) ಅಷ್ಟೇ ಅರಿದು ಬೆರೆಸಿಕೊಳ್ಳುವ ರಂಗೋಲಿ. ಬಣ್ಣ ಹಚ್ಚಿಸಿಕೊಂಡ ಮೇಲೂ ತುಸು ಒತ್ತಿನಲ್ಲೇ ಒಣಗಿ ಗಂಟಾಗದೇ ಬೆರಳುಗಳಿಂದ ನುಸುಳುವ ರಂಗೋಲಿಗೆ ಬೆಲೆ ಹೆಚ್ಚು. ಅಂತಹ ರಂಗೋಲಿ ತನ್ನ ಕೈಗೆ ಸಿಕ್ಕು, ಹಬ್ಬದಲ್ಲಿ ಅಂಗಳದ ಅಂದ ಹೆಚ್ಚಿದ್ದರೆ ಅಮ್ಮ, "ನನ್ ಮಗ ತಂದ್ ಕೊಟ್ಟ ರಂಗೋಲಿ" ಎನ್ನುತ್ತಿದ್ದಳು ಹೆಮ್ಮೆಯಿಂದ, ಬಣ್ಣ ಮಾಸಿ ರಂಗೋಲಿ ಕೆಟ್ಟರೂ ಅದೇ ಮಾತು, ಆದರೆ ಕೊಂಕಿನಿಂದ ತುಂಬಿ ತುಳುಕುವ ಉಲಿಯಲ್ಲಿ (ದನಿ) ಇರುತ್ತಿತ್ತು.

ಈ ಹಬ್ಬಗಳ ಹಿಂದಿನ ಇರುಳಲ್ಲಿ ನಾನು ಅಮ್ಮ ರಂಗೋಲಿ ಬರೆದು ಮುಗಿಸುವವರೆಗೂ ಎದ್ದಿರಬೇಕಿತ್ತು ಯಾಕೆಂದರೆ, ರಂಗೋಲಿಯನ್ನು ನೋಡುವವರಿಗೆ ಆಯಾ ಹಬ್ಬದ ಶುಭಾಶಯವೆಂದು ಬರೆಯಲು. ಎತ್ತುಗೆಗೆ (ಉದಾಹರಣೆ), 'ಸುಗ್ಗಿ ಹಬ್ಬ ಸಂಕ್ರಾಂತಿಯ ಶುಭಾಶಯಗಳು' – ಬರೀ ಕನ್ನಡದಲ್ಲಿ ಅಷ್ಟೇ ಅಲ್ಲ, ಐದನೆಯ ತರಗತಿಗೆ ಬಂದ ಮೇಲೆ ಇಂಗ್ಲಿಷಿನಲ್ಲೂ ಬರೆಯುತ್ತಿದ್ದೆ. ಅದೇನೋ ಕೆಲವರ ಮನೆಯ ಮುಂದೆ, ಶುಭಾಷಯಗಳು ಎಂದು ಬರೆದಿರುತ್ತಿದ್ದರು. ನನಗೂ ಮತ್ತು ಷ ಬಳಸಿ ಬರೆದಿದ್ದ ಪಕ್ಕದ ಮನೆಯ ಹತ್ತನೆಯ ತರಗತಿಯ ಅಕ್ಕನಿಗೂ ಒಮ್ಮೆ ಇದರ ಬಗ್ಗೆ ತುಂಬಾ ಚರ್ಚೆಯಾಗಿತ್ತು. ಅವತ್ತಿನ 'ಪ್ರಜಾವಾಣಿ'ಯನ್ನು ತಂದು ತೋರಿಸಿದ ಮೇಲೆಯೇ ಆ ಅಕ್ಕ ತಿದ್ದಿಕೊಂಡಿದ್ದು. ಸುದ್ದಿಹಾಳೆಗಳನ್ನು ನಂಬುವ ಮಟ್ಟ ಈಗಿಗಿಂತಲೂ ಸಾವಿರ ಪಟ್ಟು ಹೆಚ್ಚಿತ್ತು ಆಗ.

ಬೆಂಗಳೂರಲ್ಲಿ ಹಬ್ಬಗಳಲ್ಲಿ ಅಲ್ಲಲ್ಲಿ ಕಾಣುವ ಬಣ್ಣದ ರಂಗೋಲಿಗಳಲ್ಲೂ ಕೆಲವಲ್ಲಿ ಕನ್ನಡದ ಹಾರೈಕೆಗಳೇ ಇರುವುದಿಲ್ಲವೆನ್ನುವುದು ನೋವು ಮೂಡಿಸುತ್ತದೆ ನನಗೆ. ಬೇರೆ ರಂಗೋಲಿಗಳನ್ನು ಅಪ್ಪಜ್ಜಿ, ಅದರ ಮೇಲೆ ನಡೆದಾಡಿಯೋ ಇಲ್ಲವೇ ತನ್ನ ಸೈಕಲ್ಲು ಇಲ್ಲಾ ಗಾಡಿಯನ್ನು ಓಡಿಸಿಯೋ ಕೆಡಿಸಿದರೆ ತಲೆ ಕೆಡಿಸಿಕೊಳ್ಳದೇ ಇರುತ್ತಿದ್ದ ಅಮ್ಮ, ಹಬ್ಬದ ರಂಗೋಲಿಯು ತಾನಿಟ್ಟ ಎಡೆಯಿಂದ ತುಸು ಅಲುಗಿಸಿದರೂ ಅಪ್ಪಜ್ಜಿಗೆ ಗದರುತ್ತಿದ್ದಳು. ಅಮ್ಮನಿಗೆ ಅಪ್ಪನಿಗಿಂತಲೂ ರಂಗೋಲಿಯನ್ನೇ ಕಂಡರೆ ಹೆಚ್ಚು ಒಲವಿತ್ತೇ? ಇಲ್ಲ, ಅದು ಜೊತೆಗಿರುವ ಜೀವ ಕಾಳಜಿಯಿಂದ ಬಿಡಿಸಿದ್ದನ್ನು ಎಚ್ಚರದಿಂದ ಕಾಪಾಡಿಕೊಳ್ಳದೇ ಹೋಗುವುದಕ್ಕೆ ತೋರುತ್ತಿದ್ದ ಸಿಟ್ಟು. ಒಲವಿರಬೇಕೆಂಬುದನ್ನು ನೆನಪಿಸುತ್ತಿದ್ದ ಸಿಟ್ಟು. ಅಪ್ಪ ಅಮ್ಮನಿಗೂ ಹೋಗ್ರಿ ಬರ್ರಿ ಎಂದು ಬಹುವಚನ ಹಚ್ಚಿ ಮಾತಾಡುವುದನ್ನ ಹೊಡೆದು ಕಲಿಸಿದ್ದಾರೆ ನಮಗೆ ಅಪ್ಪ ಅಮ್ಮ. ಈ ಪ್ರಬಂಧದಲ್ಲೆಲ್ಲಾ ಅವಳನ್ನು ಏಕವಚನದಲ್ಲಿ ಮಾತಾಡಿಸಿರುವುದನ್ನು ತಿಳಿದರೆ ಕಸಬರಿಗೆ ಕೈಗೆ ಎತ್ತಿಕೊಳ್ಳುವಳೋ ಏನೋ!

ತಪ್ಪಿಲ್ಲದೇ ದುಂಡಾಗಿ ಬರೆಯುತ್ತಿದ್ದ ನನಗೆ ಮತ್ತು ನನ್ನ ಕೈಬರಹಕ್ಕೆ ಹಬ್ಬದ ಹಿಂದಿನ ಇರುಳು ನಮ್ಮ ಓಣಿಯಲ್ಲಿ ಬಹಳಷ್ಟು ಮೆಚ್ಚುಗರು ಹುಟ್ಟಿಕೊಂಡಿರುತ್ತಿದ್ದರು. ಅಮ್ಮ ಬಿಡಿಸುತ್ತಿದ್ದ ಚಂದದ ರಂಗೋಲಿಗಳ ಮುಂದೆ ನನ್ನ ಕೈಬರಹ ಕಾಣಿಸುತ್ತಿದ್ದುದು ನನ್ನ ಎಳೆತನ ನನಗೆ ಕೊಟ್ಟಿರುವ ಗಟ್ಟಿ ನೆನಪುಗಳಲ್ಲಿ ಒಂದು.

5

ಹೆಣ್ಣಿಗೆ ನಂಟಿರುವ ಪುರುಳುಗಳಲ್ಲಿ (ವಿಷಯ) ಆಗುವ ಬದಲಾವಣೆ, ದೇವರಾಣೆ ಗಂಡುಮಕ್ಕಳ ಪುರುಳುಗಳಲ್ಲಿ ಆಗುವುದೇ ಇಲ್ಲ. ಉಡುಗೆ ತೊಡುಗೆ, ಅಂದ ಚಂದವನ್ನು ಹೆಚ್ಚಿಸುವ ಸರಕುಗಳು, ಸ್ಕೂಟಿಗಳು, ಅಡುಗೆಮನೆಯ ಸರಕುಗಳು — ಹೀಗೇ ಏನೇ ತೆಗೆದುಕೊಳ್ಳಿ, ಅಲ್ಲೆಲ್ಲ ಗಂಡಸರಿಗೆ ಮೂರು ಕಾಸಿನ ಬೆಲೆಯಿಲ್ಲ. ನಾನು ಬೆಳೆದಂತೆ ರಂಗೋಲಿ ಬಿಡಿಸುವ ಬಗೆಗಳೂ ಬದಲಾಗಿವೆ, ಹೆಚ್ಚಾಗಿವೆ, ಬೆಳೆದಿವೆ.

ಕೊಳವೆಯೊಳಗೆ ರಂಗೋಲಿ ಹಾಕಿ ಬಿಡಿಸುವುದು, ಮೊದಲೇ ಯಾವುದೋ ಚಿತ್ತಾರವಿರುವ ಜರಡಿಗೆ ರಂಗೋಲಿ ಹಾಕುವುದು, ರಂಗೋಲಿಗೆ ಬಣ್ಣ ಕಲೆಸದೇ ನೇರ ಬಣ್ಣವನ್ನೇ ರಂಗೋಲಿಗೆ ತುಂಬುವುದು. ಚುಕ್ಕಿ ಇಲ್ಲದೇ ಬಿಡಿಸುವುದು. ಇವೆಲ್ಲವೂ ಆಗಿವೆ. ಆದರೆ, ಇವೆಲ್ಲದರಿಂದ ಬಿಡಿಸುವವರ ನಿಜವಾದ ಕಸುವು, ದುಡಿಮೆ ಕಾಣುವುದೇ? ಎಂಬ ಕೇಳ್ವಿಯನ್ನು (ಪ್ರಶ್ನೆ) ಯಾರಾದರೂ ನನ್ನನ್ನು ಕೇಳಿದರೆ ನಾನು ಶೇಕಡಾ ಐವತ್ತೊಂದು ಪರ್ಸೆಂಟ್ ಇಲ್ಲವೆಂದೇ ಹೇಳುತ್ತೇನೆ. ಕಂಡ ಕಂಡ ಸಭೆ ಸಮಾರಂಭ, ಸಾಂಸ್ಕೃತಿಕ ಕಾರ್ಯಕ್ರಮ, ಜಾತ್ರೆ, ಉತ್ಸವಗಳ ಎಡೆಗಳಲ್ಲಿ ರಂಗೋಲಿ ಪೈಪೋಟಿಗಳನ್ನು ನಡೆಸುವವರು ಇವನ್ನೆಲ್ಲಾ ನೆನಪಲ್ಲಿಟ್ಟುಕೊಂಡು ನಡೆಸಬೇಕು. ಚುಕ್ಕಿ ಇಟ್ಟು ಬಿಡಿಸುವ ಮತ್ತು ಚುಕ್ಕಿ ಇಡದೇ ಬಿಡಿಸುವ ರಂಗೋಲಿ ಪೋಟಿ ಎಂದು ಬೇರೆ ಬೇರೆ